ಥಾಯ್ಲೆಂಡ್ ಪ್ರವಾಸ ಎಂದಕೂಡಲೇ ತುಂಟತನದ ನೋಟಗಳು ಎದುರಾಗುವುದು ಸಾಮಾನ್ಯ. ಥಾಯ್ಲೆಂಡ್‌ಗೆ ಮತ್ತೊಂದು ಮುಖವೂ ಇದೆ, ಆದು ಅಪೂರ್ವ ಪ್ರಾಕೃತಿಕ ಸೌಂದರ್ಯದ ಆಯಾಮ. ಕೋ ಸಮೂಯಿ ಕಡಲ ಕಿನಾರೆಯನ್ನೇ ನೋಡಿ – ಅಲ್ಲಿನ ಪ್ರಶಾಂತ ಪರಿಸರ ಸೌಂದರ್ಯೋಪಾಸಕರ ಪಾಲಿಗೆ ಹಬ್ಬವಿದ್ದಂತೆ.

■ ಗಾಯತ್ರಿ ರಾಜ್



# ಕೋ ಸಮೂಯಿ!

ಆಕಾಶದಿಂದ ಹಸಿರು ಮತ್ತು ನೀಲಿಯ ಚಿತ್ರಗಳಂತೆ ಕಾಣುವ ದ್ವೀಪಗಳ ನಡುವೆ ಹಸಿರುಹೊದ್ದು ನಿಂತಿರುವ ಗುಡ್ಡಗಳು ಹಾಗೂ ಅಲ್ಲಲ್ಲಿ ತೇಲುವ ಬಣ್ಣದ ಬೋಟುಗಳು ನಮ್ಮನ್ನು ಒಮ್ಮೆಲೇ ಯಾವುದೋ ಕಿನ್ನರಲೋಕಕ್ಕೆ ತಂದಿಳಿಸುತ್ತವೆ. ಸರೋವರದಂಥ ಸ್ವಚ್ಛವಾದ ನೀರಲ್ಲಿ ನಿಂತಾಗ ಅಬ್ಬರವಿಲ್ಲದ ಅಲೆಗಳು ನಮ್ಮನ್ನು ನಿಂತಲ್ಲೇ ತೂಗಿದಂತಾಗುತ್ತದೆ. ಪಾದದಡಿಯಲ್ಲಿ ಕಚಗುಳಿಯಿಡುತ್ತಾ ಹೊಯ್ದಾಡುವ ಬಣ್ಣಬಣ್ಣದ ಮೀನುಗಳು, ಕಡಲತೀರದ ಮರಳಿನಲ್ಲಿ ಕಾಲು ಚಾಚಿ ಜಗತ್ತನ್ನೇ ಮರೆತ ಜೋಡಿಗಳನ್ನು ನೋಡುತ್ತಿದ್ದರೆ, ಮನಸ್ಸು ಮತ್ತೆ ಕವಿಯಾಗುತ್ತದೆ. ನಡುವೆ ಬಳಸಿ ಪಿಸುಗುಡುತ್ತಾ, ಕೆನ್ನೆ ರಂಗೇರಿಸಿಕೊಂಡ ಪ್ರೇಮಿಗಳು ತಮ್ಮದೇ ಲೋಕದಲ್ಲಿ ವಿಹರಿಸುವಷ್ಟು ಏಕಾಂತ. ಯಾವಗದೋ 'ಕೆರಿಬಿಯನ್' ಅಥವಾ 'ಗ್ರೀಸ್'ನ ಬೀಚಿರಬಹುದು ಎಂದೆನಿಸಿತೆ? ಇವು ಥಾಯ್ಲೆಂಡ್‌ನ 'ಕೋ ಸಮೂಯಿ' ಎಂಬ ಸುಂದರ ಬೀಚ್‌ಗಳಲ್ಲಿ ಕಾಣುವ ರಮಣೀಯ ದೃಶ್ಯಗಳು.

ತೆಂಗಿನ ಮರಗಳ ನಡುವೆ, ಬಿಳಿಯ ಮರಳ ತೀರದ ಆ ರೆಸಾರ್ಟ್‌ಗಳ ನೋಡೋದೇ ಕಣ್ಣಿಗೆ ಒಂದು ಹಬ್ಬ. ಕಡಲ ಅಲೆಯ ಮೊರೆತ, ರೆಸಾರ್ಟ್ ಒಳಗಿನ ಕಾರಂಜಿಯ ಜುಳು ಜುಳು, ಹಕ್ಕಿಯ ಚಿಲಿಪಿಲಿ ಎಲ್ಲವೂ ಸ್ಪಷ್ಟವಾಗಿ ಕೇಳಿಸುವಷ್ಟು ನಿಶ್ಶಬ್ದ. ಸಮುದ್ರಕ್ಕೆ ಎದುರಾಗಿ ವಿಶಾಲವಾದ 'ಇನ್ಫಿನಿಟಿ ಪೂಲ್' (ಈಜುಕೊಳ) ಸುತ್ತಲೂ ಆರಾಮಾಗಿ ಪ್ರಕೃತಿ ಸೌಂದರ್ಯವನ್ನು ಆಹ್ಲಾದಿಸಲು ಅನುಕೂಲವಾಗುವಂತೆ ಅರ್ಧ ಚಂದ್ರಾಕೃತಿಯ ಡೈನಿಂಗ್ ಏರಿಯ, ಅದರ ಸುತ್ತಲೂ ಮತ್ತು ನಡೆಯುವ ಹಾದಿಯ ಇಕ್ಕೆಲಗಳಲ್ಲೂ ಪ್ಲುಮೇರಿಯ, ಜೆರೇನಿಯಮ್, ಜರ್ಬೇರಾ ಹೂವಿನ ಗಿಡಗಳು ಘಂ ಎನ್ನುತ್ತಾ ಸುರಲೋಕವನ್ನೇ ಸೃಷ್ಟಿಸಿದ್ದವು. ಅದೆಲ್ಲವನ್ನೂ ಕಣ್ಣರಳಿಸಿ ನೋಡುತ್ತಾ, ಬೆಂಗಳೂರಿನಿಂದ ಬ್ಯಾಂಕಾಕ್, ಅಲ್ಲಿಂದ ಕೋ ಸಮೂಯಿಗೆ ವಿಮಾನದಲ್ಲಿ ಒಂದು ಗಂಟೆಯ ಪ್ರಯಾಣದ ಪ್ರಯಾಸವನ್ನು ಮರೆತವಳಿಗೆ ಎಚ್ಚರಿಸಿದ್ದು 'ಕಾಪುನ್ಕಾ...' ಎನ್ನುವ ಮಧುರವಾದ ಧ್ವನಿ. ದೇಶಿಯ ಉಡುಪು ತೊಟ್ಟು, ಕೈ ಜೋಡಿಸಿ ನಮಸ್ಕರಿಸುತ್ತಾ, ಕಾಪುನ್ಕಾ (ಹೆಂಗಸರಿಗೆ), ಕಾಪುನ್ಕಾಫ್ (ಗಂಡಸರಿಗೆ) ಎಂದು ಕೊರಳಿಗೆ ಹೂ ಮಾಲೆ ತೊಡಿಸಿ ಸ್ವಾಗತಿಸುತ್ತಿದ್ದರೆ, ಪ್ರಾಂತೀಯ ತಂಪುಪಾನೀಯ ಪ್ರಯಾಣದ ಆಷ್ಟೂ ಸುಸ್ತನ್ನು ನಿವಾರಿಸಿತ್ತು.

## ಶಾಂತ ಸಮುದ್ರದ ಸನ್ನಿಧಿಯಲ್ಲಿ

ವಿಶಾಲವಾದ ವಿಲ್ಲಾದಲ್ಲಿ ಸಂಜೆಯವರೆಗೂ ವಿರಮಿಸಿ, ಕಡಲ ಕಿನಾರೆಗೆ ಹೋದರೆ ಬೇರೆಯದೇ ಪ್ರಪಂಚ ಕಾಣಿಸಿತು. ಮಂದವಾದ ರಂಗುರಂಗಿನ ದೀಪಗಳಿಂದ ಅಲಂಕೃತಗೊಂಡ ತೀರದಲ್ಲಿ ಮಧುರವಾದ ಆರ್ಕೆಸ್ಟ್ರಾ ಆಲಿಸುತ್ತಾ ತೇಲುತ್ತಿದ್ದವರಿಗೆ, ಕುಳಿತಲ್ಲಿಯೇ ತಿಂಡಿತಿನಿಸು ಪಾನೀಯಗಳ ಸರಬರಾಜು ನಡೆಯುತ್ತಿತ್ತು. ತುಸು ದೂರದಲ್ಲಿ ಏಕಾಂತ ಬಯಸುವವರಿಗಾಗಿ ಬಿಳಿಯ ಸ್ಯಾಟಿನ್ ಕ್ಯಾನೋಪಿಗಳನ್ನು, ಕೆಂಪು ಬಲೂನ್ ಮತ್ತು ರಿಬ್ಬನ್‌ಗಳಿಂದ ಕ್ಯಾಂಡಲ್ ಲೈಟ್ ಡಿನ್ನರ್‌ಗಾಗಿ ಅಲಂಕರಿಸಿದ್ದರು. ಅದರೆದುರಿಗೆ ಚಂದ್ರನ ಬೆಳಕಿನಿಂದ ಬೆಳ್ಳಿಯ ಅಲೆಗಳನ್ನು ಬೆನ್ನೇರಿಸಿಕೊಂಡು ಮೊರೆಯುತ್ತಿರುವ ಸಮುದ್ರ.